# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ95/2011**
**ಡಿ.ಡಬ್ಲ್ಯೂಃ2, ರಾಣೊಜಿರಾವ**

ದಿನಾಂಕ :16-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಪಾಟಿ ಸವಾಲು :- ಶ್ರೀ ವಿ ಎಮ್ ಎ ವಕೀಲರಿಂದ

ನನಗೆ ಈಗ 53 ವರ್ಷ ವಯಸ್ಸು. ಸಾಕ್ಷಿ ಮತ್ತೆ ಹೇಳುತ್ತಾರೆ 49 ವರ್ಷ ವಯಸ್ಸು. ಅಣ್ಣಾರಾವ ನನ್ನ ಮಾವನಾಬೇಕು. ಅವರು ನನ್ನ ತಾಯಿಯ ತಮ್ಮ. ನನ್ನ ಹೆಂಡತಿಯ ಹೆಸರು ಜಗದೇವಿ. ಸದರಿ ಜಗದೇವಿಗೆ ಏಷ್ಟು ಜನ ಅಕ್ಕ ತಂಗಿಯರು ಎಂದರೆ ಗೊತ್ತಿಲ್ಲ ನನ್ನ ಮದುವೆಯಾಗಿ 25 ವರ್ಷ ಆಗಿರುತ್ತದೆ. ಸದರಿ ಜಗದೇವಿಯ ಅಕ್ಕ ತಂಗಿಯರಲ್ಲಿ ಯಾರು ತೀರಿಕೊಂಡಿರುತ್ತಾರೆ ಅಥವಾ ಜೀವಂತ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಜಗದೇವಿಯವರ ತಾಯಿಯ ಹೆಸರು ಸುಮಿತ್ರಾಬಾಯಿ. ಸುಮೀತ್ರಾಬಾಯಿಯವರ ತಾಯಿಯ ಹೆಸರು ಗೊತ್ತಿಲ್ಲ. ಮೂಲ ಪುರಷ ರಾಣೋಜಿ 1972 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ಅಜ್ಜಿ ರತ್ನಬಾಯಿ ಅವರಿಗೆ ಈಗ 85 ವರ್ಷ ವಯಸ್ಸು. ಸದರಿ ರತ್ನಬಾಯಿ ಇವರು ಮದುವೆಯಾದಗ 20 ವರ್ಷ ವಯಸ್ಸಿನವರಾಗಿದ್ದರು. ನಾನು ಹುಟ್ಟುವ ಮೊದಲು ಮೂಲ ಪುರುಷ ರಾಣೋಜಿ ಇವರ ಕುಂಬುಂಟುಬದ ಎಲ್ಲಾ ವಿಷಯಗಳ ಬಗ್ಗೆ ನನಗೆ ಗೊತ್ತಿರುತ್ತದೆ.

ಸದರಿ ರಾಣೋಜಿಯವರಿಗೆ ಸರ್ವೆ ನಂಬರ 174, 23 ಎಕರೆ 18 ಗುಂಟೆ ಸರ್ವೆ ನಂಬರ 172 4 ಎಕರೆ 30 ಗುಂಟೆ ಸರ್ವೆ ನಂಬರ 57, 10 ಎಕರೆ 14 ಗುಂಟೆ ಸರ್ವೆ ನಂಬರ 59, 23 ಎಕರೆ 18 ಗುಂಟೆ ಸರ್ವೆ ನಂಬರ 103, 10 ಎಕರೆ 15 ಗುಂಟೆ ಸರ್ವೆ ನಂಬರ 185, 19 ಎಕರೆ 11 ಗುಂಟೆ ಆಸ್ತಿಗಳು ಇದ್ದವು. ಸರ್ವೆ ನಂಬರ 162 ಸ್ವತ್ತು 24 ಎಕರೆ 32 ಗುಂಟೆ ಮಲಘಾಣದಲ್ಲಿ ಅವರ ಹೆಸರಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ರಾಣೋಜಿಯವರಿಗೆ ಲಕ್ಷ್ಮೀಬಾಯಿ ಎನ್ನುವ ಮಗಳು ಇದ್ದಳು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ . ಅದೇ ರೀತಿ ಸದರಿ ರಾಣೋಜಿಯವರಿಗೆ ರಂಗಮ್ಮ ಇವರಿಂದ ಹೀರಾಬಾಯಿ ಎನ್ನುವ ಮಗಳು ಇದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸದರಿ ರಂಗಮ್ಮ ರಾಣೋಜಿಯವರ ಮೊದಲನೇಯ ಹೆಂಡತಿ ಎಂದರೆ ಸಾಕ್ಷಿ ಸುಳುಳ ಎಂದು ಹೇಳುತ್ತಾರೆ . ಸದರಿ ರಾಣೋಜಿ ಜೀವಂತ ಇದ್ದಾಗ ಸರ್ವೆ ನಂಬರ 162 ಇದನ್ನು ಲಕ್ಷ್ಮಿಬಾಯಿ ಇವರಿಗೆ ದಾನವಾಗಿ ಕೊಟ್ಟಿದ್ದಾರೆ ಎಂದರೆ ಸುಳ್ಳು ಎಂದು ಹೇಳುತ್ತಾರೆ. ಲಕ್ಷ್ಮಿಬಾಯಿಯವರ ಮಕ್ಕಳನ್ನು ಜಗದೇವಪ್ಪ ಹಾಗೂ ಶರಣಗೌಡ ಒಂದು ಮತ್ತು 2 ನೇ ಪ್ರತಿವಾದಿಗಳು ಪರಿಚಯ ಇರುತ್ತಾರೆ.

ಸದರಿ ಜಗದೇವಪ್ಪ ಮತ್ತು ಶರಣಗೌಡ ಓ ಎಸ್ 189/2002 ದಾವೆಯನ್ನು ದಾವಾ ಸ್ವತ್ತಿನ ಬಗ್ಗೆ ಹಾಕಿದ್ದ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ರಾಣೋಜಿರಾವ 2 ನೇ ಹೆಂಡತಿ ಹಿರಕನ್ನಬಾಯಿ ಹಾಗೂ ಅವರ ಮಗಳು ಶಾರಾದಾಬಾಯಿ ಪಾರ್ಟಿ ಇದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ರಾಜಿ ಮಾಡಿಕೊಂಡು ಸರ್ವೆ ನಂಬರ 185 ರಲ್ಲಿ 19 ಎಕರೆ 11 ಗುಂಟೆ ಇದನ್ನು ಈ ಕೇಸಿನ 1 ಮತ್ತು 2 ನೇ ಪ್ರತಿವಾದಿಯ ಪಾಲಿಗೆ ಕೊಡಲಾಯಿತು ಎಂದರೆ ಇರಬಹುದು ಎಂದು ಹೇಳುತ್ತಾರೆ. ಸದರಿ ರಾಜಿಯಲ್ಲಿ ಸರ್ವೆ ನಂಬರ 162 ರ ಬಗ್ಗೆ ನಮ್ದದ್ದು ಯಾವುದು ತಕ್ಕರಾರು ಇಲ್ಲ ಎಂದು ರತ್ನಬಾಯಿ ಹೇಳಿದ್ದರು ಎಂದರೆ ಸುಳ್ಳು ಎಂದು ಹೇಳುತ್ತಾರೆ.

ಸರ್ವೆ ನಂಬರ 185 ಇದು ಮೊದಲಿಗೆ ನನ್ನ ಮಾವ ಅಣ್ಣಾರಾವ ಹೆಸರಿಗೆ ಇತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ರಾಜಿ ಆದ ನಂತರ ಸರ್ವೆ ನಂಬರ 185 ಇದು ಶರಣಗೌಡ ಹಾಗೂ ಜಗದೇವಪ್ಪ ಇವರ ಹೆಸರಿಗೆ ಖಾತೆ ಬದಲಾವಣೆ ಆಗಿದೇ ಎಂದರೆ ಸಾಕ್ಷಿ ಆಗಿರಬಹುದು ಎಂದು ಹೇಳುತ್ತಾರೆ. ಅಣ್ಣಾರಾವ ಇವರು 2004 ರಲ್ಲಿ ತೀರಿಕೊಂಡಿರುತ್ತಾರೆ. ಸದರಿ ಓ ಎಸ್ 189/2002 ರಲ್ಲಿ ಆದ ರಾಜಿ ತಪ್ಪು ಇದೆ ಎಂದು ನಾವು ಹೇಳಿದ್ದು ಆ ಬಗ್ಗೆ ರತ್ನಾಬಾಯಿ ಇವರ ಸಾಕ್ಷಿ ದಾಖಲೆ ಹಾಕಿರುತ್ತೇನೆ.ನನ್ನ ಅತ್ತೆ ಸುಮೀತ್ರಾಬಾಯಿ ಓ ಎಸ್ ನಂಬರ 118/2011 ದಾವೆ ಹಾಕಿದ್ದರು ಎಂದರೆ ಸರಿ. ಅದು ತಿರ್ಪು ಆದ ನಂತರ ಏಫ್ ಡಿ ಪಿ 5/2018 ಇದೆ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ಆರ ಎ 75/2017 ರಲ್ಲಿ ನನ್ನ ಹೆಂಡತಿ ತನ್ನನ್ನು ಪಾರ್ಟಿಯಾಗಿ ಮಾಡಬೇಕು ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅದೇ ರೀತಿ ಏಫ್ ಡಿ ಪಿ ಪ್ರಕರಣದಲ್ಲಿ ನಾವು ಸುಮೀತ್ರಾಬಾಯಿ ಮಕ್ಕಳು ಎಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಆ ವಿಚಾರ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಎರಡು ಪ್ರಕರಣದಲ್ಲಿ ವಕೀಲರು ಯಾರು ಇದ್ದರು ಎಂದು ಹೇಳಲು ಆಗುವುದಿಲ್ಲ.

ರಾಣೋಜಿಯವರಿಗೆ ರಂಗಮ್ಮ ಮೊದಲನೇಯ ಹೆಂಡತಿ ಹಾಗೂ ಅವರಿಂದ ಹೀರಾಬಾಯಿ ಹಾಗೂ ಲಕ್ಷ್ಮಿಬಾಯಿ ಇಬ್ಬರು ಮಕ್ಕಳು ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ ಸದರಿ ಹೀರಾಬಾಯಿಗೆ ಸುಮೀತ್ರಾಬಾಯಿ ಮಗಳು ಎಂದರೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಸುಮೀತ್ರಾಬಾಯಿ ಹೀರಾಬಾಯಿ ಮಗಳು ನನ್ನ ಅತ್ತೆ ಎಂದರೆ ಸಾಕ್ಷಿ ನನ್ನ ಅತ್ತಯ ಹೆಸರಗು ಸುಮೀತ್ರಾಬಾಯಿ ಅವರ ತಾಯಿ ಹೆಸರು ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಮದುವೆಯಾಗುವ ಕಾಲಕ್ಕೆ ನನ್ನ ಅತ್ತೆ ಮಾವನ ಹೆಸರು ವಿಚಾರ ಮಾಡಲಾಗಿ ಸುಮೀತ್ರಾಬಾಯಿ ಮತ್ತು ಸಿದ್ದಣ್ಣ ಎಂದು ಗೊತ್ತಾಗಿತ್ತು.

**ಅಸಲು ದಾವಾ ನಂಃ95/2011**
**ಡಿ.ಡಬ್ಲ್ಯೂಃ2, ರಾಣೊಜಿರಾವ**

ನಾನು ಉದ್ದೇಶಪೂರ್ವಕವಾಗಿ ನನ್ನ ಅತ್ತೆಗೆ ಏಷ್ಟು ಜನ ಮಕ್ಕಳು ಎಂದು ಹೇಳುತ್ತಿಲ್ಲ ಎಂದರೆ ಸರಿಯಲ್ಲ.ಸದರಿ ಸುಮೀತ್ರಾಬಾಯಿ ಇವರಿಗೆ 4 ಜನ ಹೆಣ್ಣು ಮಕ್ಕಳು ಎಂದರೆ ಇದ್ದಿರಬಹುದು ಎಂದು ಹೇಳುತ್ತಾರೆ. ರಾಣೋಜಿಯರಿಗೆ ಮೊದಲನೇಯ ಹೆಡಂತಿಯಿಂದ ಬರೀ ಹೆಣ್ಣು ಮಕ್ಕಳು ಹುಟ್ಟಿದ್ದರಿಂದ ಹಿರಕ್ಕನಬಾಯಿ ಎನ್ನುವವರು 2 ನೇ ಹೆಂಡತಿಯಾಗಿ ಸ್ವಿಕ್ಕೇರಿಸಿದ್ದರು ಎಂದರೆ ಸುಳ್ಳು ಎಂದು ಹೇಳುತ್ತಾರೆ. ಸದರಿ ಹಿರಕ್ಕನಾಬಾಯಿಗೆ 3 ನೇ ಪ್ರತಿವಾದಿ ಮಗಳು ಎಂದರೆ ಸುಳ್ಳು ಎಂದು ಹೇಳುತ್ತಾರೆ. ಇವರಿಬ್ಬರಿಂದ ಹೆಣ್ಣು ಮಕ್ಕಳು ಹುಟ್ಟಿದ್ದರಿಂದ ರಾಣೋಜಿಯವರು ರತ್ನಬಾಯಿ ಎನ್ನುವವರು 3 ನೇ ಹೆಂಡತಿಯಾಗಿ ಸ್ವಿಕ್ಕೇರಿಸಿದ್ದರು ಎಂದರೆ ಸುಳ್ಳು ಎಂದು ಹೇಳುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗಾಗಿ ವಕೀಲರು ಸಮಯ ಕೋರಿದ್ದರಿಂದ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ